# ಆಯ್ಕೆಯ ಸಮಸ್ಯೆ

ಅಮೆರಿಕಾದ ಖ್ಯಾತ ಕವಿ ರಾಬರ್ಟ್ ಫ್ರಾಸ್ಟ್‌ನ ಪ್ರಸಿದ್ಧ ಕವಿತೆಗಳಲ್ಲಿ 'ದಿ ರೋಡ್ ನಾಟ್ ಟೇಕನ್' (ಬಿಟ್ಟು ಬಂದ ಹಾದಿ) ಎಂಬುದೂ ಒಂದು. ಈ ಕವಿತೆಯಲ್ಲಿ ಕವಿ ವೈಯಕ್ತಿಕ ಎನ್ನಿಸುವ ಸಂಗತಿಯೊಂದಕ್ಕೆ ಸಾರ್ವತ್ರಿಕ ವ್ಯಾಪ್ತಿ ಬರುವಂತೆ ಮಾಡಿದ್ದಾನೆ. ಕವಿತೆ ಸರಳವಾದುದು. ಒಂದು ದಿನ ಕಾಡೊಂದರಲ್ಲಿ ನಡೆಯುತ್ತಿದ್ದ ಕವಿ ತಾನು ನಡೆದು ಬಂದ ದಾರಿ ಎರಡು ಕವಲುಗಳಾಗುವ ಸ್ಥಳಕ್ಕೆ ಬರುತ್ತಾನೆ. ಆ ಕವಲು ದಾರಿಗಳಲ್ಲಿ ಆತ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಇದು ಕವಿಯ ಪಾಲಿಗೆ ಒಂದು ನಿರ್ಣಾಯಕ ಘಟ್ಟ. ಎರಡರಲ್ಲಿ ಒಂದು ಜನರ ಓಡಾಟದಿಂದ ಸವೆದಿದೆ; ಇನ್ನೊಂದು ಸವೆದಿಲ್ಲ. ಸ್ವಲ್ಪ ಯೋಚಿಸಿದ ಕವಿ ಎರಡನೆಯದನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಮುಂದೆ ಎಂದಾದರೂ ಇನ್ನೊಂದು ದಾರಿಯಲ್ಲಿ ಹೋಗಲಾದೀತೆಂದು ಅವನ ನಿರೀಕ್ಷೆ. ಆದರೆ ಒಮ್ಮೆ ಒಂದು ಹಾದಿಯನ್ನು ಹಿಡಿದ ಮೇಲೆ, ಅದು ತನ್ನನ್ನು ಎಲ್ಲೆಲ್ಲೋ ಕರೆದುಕೊಂಡು ಹೋಗಿ, ಹಿಂತಿರುಗಲು ಅವಕಾಶ ಕೊಡುವುದಿಲ್ಲ ಎಂಬ ಸತ್ಯ ಅವನಿಗೆ ನಿಧಾನವಾಗಿ ಹೊಳೆಯುತ್ತದೆ. ಕವಿಯ ಆಯ್ಕೆ ಅವನ ಬದುಕಿನಲ್ಲಿ ಘಟಿಸುವ ಎಲ್ಲ ಬದಲಾವಣೆಗಳಿಗೂ ಕಾರಣವಾಗುತ್ತದೆ.

ಫ್ರಾಸ್ಟ್‌ನ ಈ ಕವಿತೆ ನಮ್ಮೆಲ್ಲರ ಬದುಕಿನಲ್ಲಿ ಬಂದೇ ಬರುವ ಆಯ್ಕೆಯ ಸಮಸ್ಯೆ ಮತ್ತು ಅದು ಹುಟ್ಟು ಹಾಕುವ ದ್ವಂದ್ವಗಳನ್ನು ನಮ್ಮ ಮುಂದೆ ಪ್ರತೀಕಗೊಳಿಸುತ್ತದೆ. ಬದುಕಿನ ಹಲವು ಘಟ್ಟಗಳಲ್ಲಿ ಈ ಆಯ್ಕೆಯ ಬಿಕ್ಕಟ್ಟನ್ನು ನಾವು ಎದುರಿಸುತ್ತೇವೆ. ಉದಾಹರಣೆಗೆ–ವಿದ್ಯಾಭ್ಯಾಸದ ಹಂತದಲ್ಲಿ, ಅಧ್ಯಯನ ವಿಷಯಗಳನ್ನು ಆರಿಸಿಕೊಳ್ಳುವ ಸಂದರ್ಭ ಬಂದಾಗ, ಬಹಳಷ್ಟು ಮಂದಿಗೆ ಈ ಸಮಸ್ಯೆ ಎದುರಾಗುತ್ತದೆ. ಯಾವುದೇ ಕೈಮೀರಿದ ಕಾರಣದಿಂದ ಒಬ್ಬಾತ ತನಗೆ ಒಗ್ಗದಿರುವ ವಿಷಯಗಳನ್ನು ಆಯ್ಕೆ ಮಾಡಿಕೊಂಡರೆ, ಆತನ ಶೈಕ್ಷಣಿಕ ಪ್ರಗತಿ ಕುಂಠಿತವಾಗಿ, ಇಡಿಯ ಬದುಕಿನ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಕಾಲ, ಹಣ, ಮಾನಸಿಕ ನೆಮ್ಮದಿ ಎಲ್ಲವನ್ನೂ ನಷ್ಟ ಮಾಡಿಕೊಳ್ಳುವ ಅಂಥ ವ್ಯಕ್ತಿ, ತನ್ನ ಆಯ್ಕೆಗಾಗಿ ಪಶ್ಚಾತ್ತಾಪ ಪಡುವಂತಾಗುತ್ತದೆ. ಹಾಗೆಯೇ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವಾಗ, ಜೀವನ ಸಂಗಾತಿಯನ್ನು ಆರಿಸಿಕೊಳ್ಳುವಾಗ ವ್ಯಕ್ತಿ ಜೀವನದ ನಿರ್ಣಾಯಕ ಘಟ್ಟಗಳು ಕಾಣಿಸಿಕೊಳ್ಳುತ್ತವೆ. ಪರಿಸ್ಥಿತಿಯ ಒತ್ತಡದಿಂದಲೋ, ತಪ್ಪು ಆಯ್ಕೆಯ ಕಾರಣದಿಂದಲೋ ಕಲಾವಿದನಾಗಬೇಕೆಂದು ಕೊಂಡಿದ್ದಾತ ಕಾರಕೂನನಾಗಬೇಕಾಗಿ ಬಂದರೆ, ಆತ ಕ್ಷೋಭೆಗೆ ಒಳಗಾಗುತ್ತಾನೆ; ವೃತ್ತಿ ಮತ್ತು ಪ್ರವೃತ್ತಿಗಳೆರಡಕ್ಕೂ ನ್ಯಾಯ ಒದಗಿಸಲಾರದ ಸ್ಥಿತಿಗೆ ತಲುಪುತ್ತಾನೆ. ಹಾಗೆಯೇ ತನ್ನ ಮನೋಧರ್ಮ ಹಾಗೂ ನಿರೀಕ್ಷೆಗಳಿಗೆ ಸರಿಹೊಂದದ ಸಂಗಾತಿಯೊಂದಿಗೆ ಬದುಕಬೇಕಾದ ವ್ಯಕ್ತಿ ಸಾಂಸಾರಿಕ ಜೀವನದ ಸಮಧಾನವನ್ನು ಕಳೆದುಕೊಳ್ಳುತ್ತಾನೆ.

ಆದರೆ ನಮ್ಮ ಮುಂದಿರುವ ಹಲವು ದಾರಿಗಳಲ್ಲಿ ಎಲ್ಲವನ್ನೂ ಪಡೆಯುವು ದಾಗಲೀ, ಪರೀಕ್ಷಿಸುವುದಾಗಲೀ ಸಾಧ್ಯವಿಲ್ಲವಷ್ಟೆ? ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದುದು ಅನಿವಾರ್ಯ. ಅಂಥ ಮಹತ್ವದ ಸಂದರ್ಭದಲ್ಲಿ ಹಿರಿಯರ ಹಿತೋಕ್ತಿ, ಹಿಂದಿನವರ ಅನುಭವ, ಭವಿಷ್ಯದ ಸಾಧ್ಯತೆ– ಈ ಎಲ್ಲವೂ ನಮಗೆ ಮಾರ್ಗ ದೀಪವಾಗುವುದಾದರೂ, ನಮ್ಮ ವೈಯಕ್ತಿಕ ನಿರ್ಧಾರವೇ ಅಂತಿಮವಾಗಿರಬೇಕು. 'ಏಕಮೇವ ಚರೇದ್ಧರ್ಮಂ ನಾಸ್ತಿ ಧರ್ಮೇ ಸಹಾಯತಾ' ಎನ್ನುತ್ತದೆ ಮಹಾಭಾರತ. 'ಧರ್ಮವನ್ನು ಆಚರಿಸುವುದರಲ್ಲಿ ಯಾರ ಸಹಾಯವೂ ಇಲ್ಲ; ಒಬ್ಬೊಬ್ಬನೇ ಅದನ್ನು ಆಚರಿಸಬೇಕು' ಎಂದು ಇದರ ಅರ್ಥ. ಜೀವನ ಧರ್ಮಕ್ಕೂ ಈ ಮಾತು ಅನ್ವಯಿಸುತ್ತದೆ. ಒಟ್ಟಿನಲ್ಲಿ ಬದುಕಿನಲ್ಲಿ ನಾವು ಮಾಡಿಕೊಂಡಿರುವ ಆಯ್ಕೆಯ ಸರಿ–ತಪ್ಪುಗಳ ದ್ವಂದ್ವ ನಮ್ಮನ್ನು ಕಾಡದಂತೆ ನಾವು ಎಚ್ಚರವಾಗಿರಬೇಕು. ನಾನು ಆಯ್ದುಕೊಂಡ ದಾರಿ ಸರಿಯಲ್ಲ ಎಂಬ ನಿಟ್ಟುಸಿರು ನಮ್ಮಿಂದ ಬಾರದಂತೆ ನೋಡಿಕೊಳ್ಳಬೇಕಾದುದು ವಿವೇಕಿಯ ಕರ್ತವ್ಯ. ಬದುಕನ್ನು ಅದು ಇರುವ ಸ್ಥಿತಿಯಲ್ಲೇ ಸ್ವೀಕರಿಸಿ, ಅದರಲ್ಲಿನ ಅರಕೆ, ಕೊರತೆಗಳನ್ನು ಸರಿಪಡಿಸಿಕೊಳ್ಳುವ ಕೆಚ್ಚು ಬದುಕನ್ನು ಸಹ್ಯಗೊಳಿಸುತ್ತದೆ, ಆಸ್ವಾದನೀಯವನ್ನಾಗಿ ಮಾಡುತ್ತದೆ ಎಂಬುದನ್ನು ಮರೆಯಬಾರದು. ಡಾ.ರಾಧಾಕೃಷ್ಣನ್ ಅವರು ಶ್ರೇಷ್ಠ ತತ್ತ್ವಶಾಸ್ತ್ರಜ್ಞರಾದುದು ಅವರ ಆಯ್ಕೆಯಿಂದಲ್ಲ; ಯಾರದೋ ಪುಸ್ತಕಗಳು ಉಚಿತವಾಗಿ ವ್ಯಾಸಂಗಕ್ಕೆ ಸಿಗುತ್ತವೆ ಎಂಬ ಒಂದೇ ಒಂದು ಕಾರಣದಿಂದ ಅವರು ತತ್ತ್ವಶಾಸ್ತ್ರವನ್ನು ಅಧ್ಯಯನ ವಿಷಯವನ್ನಾಗಿ ಆರಿಸಿಕೊಂಡು, ಅದನ್ನೇ ಶ್ರದ್ಧೆಯಿಂದ ವ್ಯಾಸಂಗ ಮಾಡಿ, ಪ್ರಪಂಚದಲ್ಲೇ ತತ್ತ್ವಶಾಸ್ತ್ರಜ್ಞರ ಶ್ರೇಷ್ಠರಲ್ಲಿ ಒಬ್ಬರೆನ್ನಿಸಿಕೊಂಡರು.

'ಕೊಟ್ಟ ಕುದುರೆಯನೇರಲರಿಯದೆ, ಮತ್ತೊಂದ ಬಯಸುವವರು ವೀರರೂ ಅಲ್ಲ, ಶೂರರೂ ಅಲ್ಲ' ಎಂಬ ಅಲ್ಲಮನ ಮಾತು ಇಲ್ಲಿ ನೆನಪಾಗುತ್ತದೆ.

■ ವೈನತೇಯ

## ಮಾತೇ ಮುತ್ತು

★ ನದಿಯ ಹಿಂದೆ ಹೋದವನಿಗೆ ಸಮುದ್ರ ಸಿಕ್ಕಿಯೇ ಸಿಕ್ಕುತ್ತದೆ.

–ನಾರ್ವೆ ಗಾದೆ

★ ನಿನ್ನ ಆಶೋತ್ತರಗಳ ಮೇಲೆ ತಣ್ಣೀರೆರಚುವವ ರಿಂದ ದೂರ ಇರು. ಅಲ್ಪರು ಯಾವಾಗಲೂ ಹಾಗೆ ಮಾಡುತ್ತಾರೆ. ನಿಜವಾದ ದೊಡ್ಡವರು 'ನೀನೂ ಸಹ ದೊಡ್ಡವನಾಗಬಲ್ಲೆ, ಮಹತ್ತರ ಸಾಧನೆ ಮಾಡ ಬಲ್ಲೆ' ಎಂದು ನಿನ್ನ ಮನಸ್ಸಿಗೆ ಬರುವಂತೆ ನಡೆಯುತ್ತಾರೆ.

– ಟ್ವೇನ್

★ ಹೊಸ ಕುದುರೆಗಳನ್ನು ಪಳಗಿಸುವಂತೆ; ಚಪಲ ರಾದ ಬಾಲಕರನ್ನು ಕೆಲವು ವೇಳೆ ಮುದ್ದಿಸುವುದು, ಕೆಲವು ವೇಳೆ ಸಂತೋಷಗೊಳಿಸುವುದು– ಈ ಕ್ರಮದಿಂದ ಬುದ್ಧಿಶಾಲಿಗಳು ಪಳಗಿಸಬೇಕು.

–ಸುಭಾಷಿತ

★ ಮುಳ್ಳು ಬಿತ್ತಿದವ ಬರಿ ಕಾಲಿನಿಂದ ಮುಳ್ಳಿನ ಮೇಲೆ ನಡೆಯಲೇಬೇಕು.

–ಲಿಬಿಯಾ ಗಾದೆ

★ ಮೇಲೇರಬೇಕಾದರೆ ಕೊಂಬೆ ಹಿಡಿಯಬೇಕೇ ಹೊರತು ಹೂವನ್ನಲ್ಲ, ಹಣ್ಣನ್ನಲ್ಲ.

–ಆಫ್ರಿಕಾ ಗಾದೆ

★ ಯಾವ ಕುಟುಂಬದಲ್ಲಿ ಗಂಡನಿಂದ ಹೆಂಡತಿಯೂ, ಹೆಂಡತಿಯಿಂದ ಗಂಡನೂ ತೃಪ್ತರಾಗಿ ಆನಂದವನ್ನು ಪಡೆಯುತ್ತಾರೋ, ಅಲ್ಲಿ ಯಾವಾಗಲೂ ಮಂಗಳ ಉಂಟಾಗುತ್ತದೆ.

–ಮನು ಸ್ಮೃತಿ

★ ನಮ್ಮ ಯೋಗ್ಯತೆ ಇಷ್ಟೇ. ಇಷ್ಟಕ್ಕಾಗಿಯೇ ದೇವರು ನಮ್ಮನ್ನು ಹುಟ್ಟಿಸಿರುತ್ತಾನೆ ಎಂಬ ಹೇಡಿತನದ ಮಾತಾಡಿ, ಹೆಚ್ಚಿನ ಯಾವ ಆಶಯವನ್ನೂ ಮಾಡದ ಜನರ ಪ್ರಗತಿಯಾಗುವುದು ಬಹಳ ಕಷ್ಟ.

–ಗಳಗನಾಥ

★ ಸಹೋದ್ಯೋಗಿಗಳನ್ನು ತುಚ್ಛವಾಗಿ ಕಂಡು ಮೇಲಿನವರ ಕಾಲೊತ್ತುವವರು ಗುಲಾಮರಾಗಿ ರುತ್ತಾರೆ ಮತ್ತು ದಬ್ಬಾಳಿಕೆಯ ಕ್ಷುಲ್ಲಕ ಮನಸ್ಥಿತಿಯವರೂ ಆಗಿರುತ್ತಾರೆ.

–ಅನುಭವಾಮೃತ

★ ಮನುಷ್ಯನ ಹೃದಯದಲ್ಲಿ ಬಲವಾಗಿ ಬೇರುಬಿಟ್ಟಿರುವ ಭಾವನೆ– ಅಸೂಯೆ.

–ಆರ್.ಬಿ.ಷೆರಿಡನ್

★ ಅಭಿಪ್ರಾಯ ಭೇದವೆಲ್ಲ ವಿರೋಧಕ್ಕೆ ಕಾರಣ ಆಗಬೇಕಾದ್ದಿಲ್ಲ– ಎನ್ನುವುದು ಇನ್ನೂ ತಿಳಿದಿಲ್ಲದಿದ್ದರೆ ದುರದೃಷ್ಟಕರ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಒಬ್ಬನ ಹೊರತು ಇಡೀ ಮಾನವ ಸಮೂಹ ಒಂದೇ ಅಭಿಪ್ರಾಯ ಹೊಂದಿದ್ದರೂ ಸಹ, ಅವನ ಬಾಯಿ ಮುಚ್ಚಿಸುವುದು ನ್ಯಾಯವಲ್ಲ. ಹಾಗೆಯೇ ಆ ಒಬ್ಬನಿಗೆ ಎಲ್ಲರ ಬಾಯಿ ಮುಚ್ಚುವ ಅಧಿಕಾರ ಇದ್ದರೂ ಹಾಗೆ ಮಾಡುವುದು ನ್ಯಾಯವಲ್ಲ.

–ಜೆ.ಎಸ್.ಮಿಲ್

★ ಕೆಟ್ಟದ್ದನ್ನು ಮಾಡಬೇಕೆನ್ನುವವನಿಗೆ ಅವಕಾಶಕ್ಕೆ ಎಂದೂ ಕೊರತೆ ಇಲ್ಲ.

–ಪಿ.ಸೈರಸ್

★ ನನ್ನ ಅದೃಷ್ಟ ಬಿದ್ದೊಡನೆಯೇ ನನ್ನ ಅಹಂಕಾರವೂ ಮಾಯವಾಯಿತು.

–ಶೇಕ್ಸ್‌ಪಿಯರ್

★ ನಾವು ತಯಾರಿಸುವ ಆಯುಧ, ಹಾರಿಸುವ ಪ್ರತಿಯೊಂದು ಗುಂಡು– ಪ್ರಪಂಚದ ಹಸಿದವರ, ಬಳಲಿದವರಿಂದ ಕಸಿಯುವುದರ ಫಲ.

–ಐಸನ್ ಹೋವರ್